ಕರ್ನಾಟಕ ಸರ್ಕಾರ

ಸಂಖ್ಯೆ: ನಅಇ 410 ಸಮಸ 2017

ಕರ್ನಾಟಕ ಸರ್ಕಾರದ ಸಚಿವಾಲಯ
ವಿಕಾಸ ಸೌಧ,
ಬೆಂಗಳೂರು, ದಿನಾಂಕ: 20.02.2018

**"ಸುತ್ತೋಲೆ"**

ವಿಷಯ:- **ನಗರಾಭಿವೃದ್ಧಿ ಇಲಾಖೆಯ ಅಧೀನದಲ್ಲಿನ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳು (10 ಮಹಾನಗರ ಪಾಲಿಕೆಗಳು ಒಳಗೊಂಡಂತೆ ಹಾಗೂ ಬಿಬಿಎಂಪಿಯನ್ನು ಹೊರತುಪಡಿಸಿ) ಹಾಗೂ ನಗರಾಭಿವೃದ್ಧಿ ಪ್ರಾಧಿಕಾರಗಳ ವ್ಯಾಪ್ತಿಯಲ್ಲಿ ಅನುಷ್ಠಾನಗೊಳಿಸುವ ಕಾಮಗಾರಿಗಳ ಟೆಂಡರ್‌ಗಳಲ್ಲಿ ಕರ್ನಾಟಕ ಸರ್ಕಾರದ Standard Tender Document KW-4 ನಲ್ಲಿನ ಟೆಂಡರ್ ಕ್ಲಾಸ್: 29.1 ರಂತೆ Unbalanced Tenders ನ ಮೊತ್ತಕ್ಕೆ Additional Security Deposit ಅನ್ನು ಪಡೆಯುತ್ತಿರುವ ಬಗ್ಗೆ ವಿನಾಯಿತಿಯನ್ನು ನೀಡುವ ಕುರಿತು.**

***********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ನಗರಾಭಿವೃದ್ಧಿ ಇಲಾಖೆಯಲ್ಲಿ ಅನುಷ್ಠಾನಗೊಳಿಸುವ ಎಲ್ಲಾ ಕಾಮಗಾರಿಗಳ ಅನುಷ್ಠಾನಕ್ಕಾಗಿ ಕರ್ನಾಟಕ ಸರ್ಕಾರದ ಪಾರದರ್ಶಕ ಕಾಯ್ದೆ 1999 ಮತ್ತು ನಿಯಮಗಳು 2000 ಹಾಗೂ ಕರ್ನಾಟಕ ಸರ್ಕಾರದ Standard Tender Documents KW-1 to KW-4 ಗಳನ್ನು ಪಾಲನೆ ಮಾಡಿಕೊಂಡು ಟೆಂಡರ್ ಪ್ರಕ್ರಿಯೆಗಳನ್ನು ಕೈಗೊಳ್ಳಲಾಗುತ್ತಿದ್ದು, ಕೆಲವು Minus ಟೆಂಡರ್‌ಗಳಲ್ಲಿನ Seriously Unblanced Tender ಗಳ ವ್ಯತ್ಯಾಸದ ಮೊತ್ತಕ್ಕೆ Standard Tender Document KW-4 ನ ಟೆಂಡರ್ ಕ್ಲಾಸ್ 25.5 ಮತ್ತು 29.1 ರಂತೆ ಗುತ್ತಿಗೆದಾರರಿಂದ Additional Security Deposit ಅನ್ನು ಪಡೆಯಲಾಗುತ್ತಿದೆ.

ಸರ್ಕಾರ, ಪೌರಾಡಳಿತ ನಿರ್ದೇಶನಾಲಯ ಮತ್ತು ಕೆಳಹಂತದಲ್ಲಿ ಅನುಮೋದಿಸುವ ಟೆಂಡರ್‌ಗಳಲ್ಲಿ ಬಹುಳಷ್ಟು ಟೆಂಡರ್‌ಗಳು ಹೆಚ್ಚು ಸ್ಪರ್ಧಾತ್ಮಕವಾಗಿ, ಟೆಂಡರ್ ದರಗಳು Minus 2% ನಿಂದ Minus 15% ವರೆಗೆ ಕಡಿಮೆ ದರಗಳು ಬರುತ್ತಿದ್ದು, ಈ ವ್ಯತ್ಯಾಸದ ಮೊತ್ತಕ್ಕೆ ಮೇಲಿನ ಕರ್ನಾಟಕ ಸರ್ಕಾರದ Standard Tender Document KW-4 ರಡಿಯಲ್ಲಿನ ಟೆಂಡರ್ ಕ್ಲಾಸ್ 25.5 ಮತ್ತು 29.1 ರಂತೆ Additional Security ಯನ್ನು ಪಡೆಯುತ್ತಿದ್ದು, ಇದರಿಂದಾಗಿ ಗುತ್ತಿಗೆದಾರರಿಗೆ ಹೆಚ್ಚು ಆರ್ಥಿಕ ಹೊರೆಯಾಗಿ ಸ್ಪರ್ಧಾತ್ಮಕ ದರಗಳು ನಮೂದಿಸುವ ಗುತ್ತಿಗೆದಾರರಿಗೆ ಪ್ರೋತ್ಸಾಹ ಇಲ್ಲದೇ ಹಿನ್ನಡೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದ್ದು, ಸ್ಪರ್ಧಾತ್ಮಕ ದರಗಳನ್ನು ನಮೂದಿಸಿದ ಗುತ್ತಿಗೆದಾರರೂ ಈ ಬಗ್ಗೆ ಆಕ್ಷೇಪ ವ್ಯಕ್ತಪಡಿಸುತ್ತಿರುವುದನ್ನು ಪೌರಾಡಳಿತ ನಿರ್ದೇಶಕರೂ ಸಹ ಸರ್ಕಾರದ ಗಮನಕ್ಕೆ ತಂದಿರುತ್ತಾರೆ.

ಮೇಲಿನ ಪ್ರಕರಣವನ್ನು ಪರಿಶೀಲಿಸಲಾಗಿ, ಕರ್ನಾಟಕ ಸರ್ಕಾರದ ಪಾರದರ್ಶಕ ಕಾಯ್ದೆ 1999 ಮತ್ತು ನಿಯಮಗಳು 2000 ದನ್ವಯ ಹೆಚ್ಚಿನ ಬಿಡ್ಡುದಾರರು ಭಾಗವಹಿಸಿ ಹೆಚ್ಚು ಸ್ಪರ್ಧಾತ್ಮಕ ದರಗಳು ಬಂದಲ್ಲಿ ಸರ್ಕಾರಕ್ಕೆ ಹೆಚ್ಚು ಲಾಭದಾಯಕವಾಗುವ ಸಾಧ್ಯತೆ ಇರುವುದರಿಂದಲೂ, Minus ಟೆಂಡರ್‌ಗಳಲ್ಲಿ ಹೆಚ್ಚಿನ ಬಿಡ್ಡುದಾರರು ಭಾಗವಹಿಸಿ ಹೆಚ್ಚು ಸ್ಪರ್ಧಾತ್ಮಕ ದರಗಳು ಬರುವ ಸಾಧ್ಯತೆ ಇರುವುದರಿಂದ, ಪಾರದರ್ಶಕ ಕಾಯ್ದೆಯ ಧ್ಯೇಯೋದ್ದೇಶಗಳನ್ವಯ ಗುತ್ತಿಗೆದಾರರಿಗೆ ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ ಶೇಕಡಾ 10% ರ ವರೆಗಿನ Minus ಟೆಂಡರ್ ಪ್ರೀಮಿಯಂಉಳ್ಳ ಟೆಂಡರ್‌ಗಳಿಗೆ (No Additional Security for Tender Premiums upto Minus 10%) Additional Security ಯನ್ನು ಪಡೆಯುವ ಕ್ರಮಕ್ಕೆ ವಿನಾಯಿತಿ ನೀಡುವುದು ಸೂಕ್ತವಾಗಿದ್ದು, ಶೇಕಡಾ 10% ಕ್ಕಿಂತ ಹೆಚ್ಚಿನ ಟೆಂಡರ್ ಪ್ರೀಮಿಯಂಉಳ್ಳ Minus ಟೆಂಡರ್‌ಗಳಿಗೆ ಮಾತ್ರ Additional Security ಯನ್ನು ಪಡೆಯುವುದು ಸೂಕ್ತವಾಗಿರುತ್ತದೆ.



ಕಾ॥ ಶುಮಾಂಗಲಿ
23/2/18

ಮೇಲಿನ ಪ್ರಸ್ತಾವನೆಗೆ ಸಂಬಂಧಿಸಿದಂತೆ ಆರ್ಥಿಕ ಇಲಾಖೆಯ ಸಹಮತಿಯನ್ನು ಕೋರಲಾಗಿದ್ದು, ಆರ್ಥಿಕ ಇಲಾಖೆಯು ತಮ್ಮ ಹಿಂಬರಹದ ಸಂಖ್ಯೆ: ಆಇ 651 ವೆಚ್ಚ-9/2017 ದಿನಾಂಕ: 11.12.2017 ರಲ್ಲಿ "ಅಸಮತೋಲನ ಟೆಂಡರ್ (Unbalanced Tenders) ಗಳಿಗೆ ಹೆಚ್ಚುವರಿ ಭದ್ರತಾ ಠೇವಣಿ ತೆಗೆದುಕೊಳ್ಳುವುದನ್ನು ನಿರ್ಧರಿಸಲು ಹಾಗೂ ಸರ್ಕಾರಕ್ಕೆ ಮತ್ತು ಸಂಗ್ರಹಣಾ ಪ್ರಾಧಿಕಾರಕ್ಕೆ ಆರ್ಥಿಕ ನಷ್ಟವಾಗದಂತೆ ಸಮಂಜಸ ಮೊತ್ತವನ್ನು ನಿಗದಿಪಡಿಸಲು ಆಯಾ ಸಂಗ್ರಹಣಾ ಪ್ರಾಧಿಕಾರವು ಸಕ್ಷಮವಾಗಿರುತ್ತದೆ. ಅದರಂತೆ ಹೆಚ್ಚುವರಿ ಭದ್ರತಾ ಠೇವಣಿ ತೆಗೆದುಕೊಳ್ಳುವುದನ್ನು ತಮ್ಮ ಹಂತದಲ್ಲಿಯೇ ನಿರ್ಧರಿಸಲು ಕ್ರಮವಹಿಸಬಹುದು ಎಂದು ನಗರಾಭಿವೃದ್ಧಿ ಇಲಾಖೆಗೆ ಸೂಚನೆ ನೀಡಿರುತ್ತದೆ".

ಹಾಗೆಯೇ ಕರ್ನಾಟಕ ಸರ್ಕಾರದ Standard Tender Document KW-4 ನ ಟೆಂಡರ್ ಕ್ಲಾಸ್ 29.1 ರಂತೆ ಗುತ್ತಿಗೆದಾರರಿಂದ Security Deposit ಅನ್ನು 5% of the Contract price plus additional security for unbalanced tender ನ ಮೊತ್ತಕ್ಕೆ ಪಡೆಯಬೇಕಾಗಿದ್ದು, Unbalanced Tender ಗೆ ಸಂಬಂಧಿಸಿದಂತೆ ಸದರಿ ಕ್ಲಾಸ್‌ನಲ್ಲಿ ಯಾವುದೇ ವಿವರಣೆಯಾಗಲಿ ಅಥವಾ ಎಷ್ಟು ಮೊತ್ತಕ್ಕೆ Additional Security ಯನ್ನು ಪಡೆಯಬೇಕು ಎಂಬ ಬಗ್ಗೆ ಯಾವುದೇ ವಿವರಣೆ ಇಲ್ಲದೇ ಇದ್ದು, ಈ ಬಗ್ಗೆ ಸಂಗ್ರಹಣಾ ಇಲಾಖೆಯು ಸೂಕ್ತ ಮಿತಿಯನ್ನು ನಿಗದಿ ಪಡಿಸಬೇಕಾಗಿರುತ್ತದೆ.

ಮೇಲ್ಕಂಡ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ ಕರ್ನಾಟಕ ಸರ್ಕಾರದ Standard Tender Document KW-4 ನ Tender Clause ನಲ್ಲಿನ Clause 29.1 ಕ್ಕೆ ಈ ಕೆಳಕಂಡಂತೆ ವಿವರಣೆಯನ್ನು ಸೇರ್ಪಡೆ ಮಾಡಿ ಸದರಿ ವಿವರಣೆಯನ್ನೊಳಗೊಂಡ Security Deposit ಗೆ ಸಂಬಂಧಿಸಿದ ಕ್ಲಾಸ್: 29.1 ಅನ್ನು ಮುಂದೆ ಕರೆಯುವ ಎಲ್ಲಾ ಟೆಂಡರ್ ಡಾಕ್ಯೂಮೆಂಟ್‌ಗಳಲ್ಲಿ ಅಳವಡಿಸಿಕೊಂಡು ಟೆಂಡರ್ ಪ್ರಕ್ರಿಯೆಗಳನ್ನು ಕೈಗೊಳ್ಳಲು ಎಲ್ಲಾ ಸಂಬಂಧಿಸಿದ ಸಂಗ್ರಹಣಾ ಪ್ರಾಧಿಕಾರಗಳು ಹಾಗೂ ಟೆಂಡರ್ ಕರೆಯುವ ಪ್ರಾಧಿಕಾರಗಳಿಗೆ (Procurement Authorities & Tender Inviting Authorities) ಸೂಚಿಸಲಾಗಿದೆ.

**Clause 29.1:** Within 20 days of receipt of the Letter of Acceptance, the successful Tenderer shall deliver to the Employer a Security deposit in any of the forms given below for an amount equivalent to 5% of the Contract price plus Additional Security for Unbalanced Tenders* in accordance with Clause 25.5 of ITT and Clause 43 of the Conditions of Contract.

- Cash or
- Banker's cheque/Demand draft/Pay Order in favour of ................ payable at................. or
- A bank guarantee in the form given in Section 10; or
- Specified Small Savings Instruments pledged to ..........................

* (Unbalanced Tender is defined as a tender where the tender premium is negative beyond 10%. Additional Security shall be collected for all Tenders whose Tender Premium is negative beyond 10%, and no Additional Security shall be collected for all tenders whose Tender Premium is upto Minus 10%. Additional Security shall be collected only to the extent of negative premium beyond minus 10%).

ಲಲಿತಾಬಾಯಿ. ಕೆ

(ಲಲಿತಾಬಾಯಿ. ಕೆ)

ಸರ್ಕಾರದ ಅಧೀನ ಕಾರ್ಯದರ್ಶಿ, (ಯೋಮೇಕೋ)

ನಗರಾಭಿವೃದ್ಧಿ ಇಲಾಖೆ.

ಪ್ರತಿ ಇವರಿಗೆ:-

1) ಮಹಾಲೇಖಪಾಲರು, (ಎ&ಇ) ಕರ್ನಾಟಕ, ಬೆಂಗಳೂರು,
2) ಅಪರ ಮುಖ್ಯ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ಕರ್ನಾಟಕ ಸರ್ಕಾರ,
3) ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ಕರ್ನಾಟಕ ಸರ್ಕಾರ,
4) ವ್ಯವಸ್ಥಾಪಕ ನಿರ್ದೇಶಕರು, ಕೆಯುಡಬ್ಲ್ಯೂಎಸ್‌ಡಿಬಿ, ಬೆಂಗಳೂರು,
5) ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು,
6) ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನೆ, ಬೆಂಗಳೂರು,
7) ರಾಜ್ಯದ ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು,
8) ರಾಜ್ಯದ ಎಲ್ಲಾ ಮಹಾನಗರ ಪಾಲಿಕೆಯ ಆಯುಕ್ತರುಗಳಿಗೆ,
9) ರಾಜ್ಯದ ಎಲ್ಲಾ ನಗರಾಭಿವೃದ್ಧಿ ಪ್ರಾಧಿಕಾರಗಳ ಆಯುಕ್ತರುಗಳಿಗೆ, ನಗರ ಮತ್ತು ಗ್ರಾಮಾಂತರ ಯೋಜನೆ ನಿರ್ದೇಶಕರ ಮುಖಾಂತರ'
10) ಶಾಖಾ ರಕ್ಷಾಕಡತ/ಹೆಚ್ಚುವರಿ ಪ್ರತಿಗಳು,

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಕೇಂದ್ರ ಸರ್ಕಾರದ ಅಮೃತ್ ಅಭಿಯಾನದ "Formulation of GIS based Master Plan" ಉಪ ಸುಧಾರಣೆ ಯೋಜನೆಯಡಿಯಲ್ಲಿ ಸ್ಥಳೀಯ ಯೋಜನಾ ಪ್ರದೇಶಗಳ ಪರಿಷ್ಕೃತ ಮಹಾಯೋಜನೆಗಳನ್ನು Geographic Information System (GIS) ನಲ್ಲಿ ತಯಾರಿಸುವ ಕುರಿತು.

ಓದಲಾಗಿದೆ:
1. ಸರ್ಕಾರದ ಆದೇಶ ಸಂಖ್ಯೆ ನಅಇ 248 ಸಿಎಸ್ಎಸ್ 2015, ಬೆಂಗಳೂರು ದಿನಾಂಕ:26.7.2016.
2. ದಿನಾಂಕ:16.6.2016 ರಂದು ಜರುಗಿದ SHPSC ಸಮಿತಿಯ 4ನೇ ಸಭೆಯ ನಡವಳಿಗಳು.
3. ಕರ್ನಾಟಕ ಮುನಿಸಿಪಲ್ ಡಾಟಾ ಸೊಸೈಟಿ ರವರ ಕಡತ ಸಂಖ್ಯೆ: ಕೆಎಂಡಿಎಸ್/ ನ.ನ.ಕೋ/ 2017-18/ ಅಮೃತ್-1/3

******

ಹಿನ್ನಲೆ:

ಅಮೃತ್ ಅಭಿಯಾನದ "Formulation of GIS based Master Plan" ಉಪ ಸುಧಾರಣೆ ಯೋಜನೆಯಡಿಯಲ್ಲಿ ರಾಜ್ಯದ 27 ನಗರ/ ಪಟ್ಟಣಗಳನ್ನು ಒಳಗೊಂಡಿದ್ದು, ಈ ಉದ್ದೇಶಕ್ಕಾಗಿ ಕೇಂದ್ರ ಸರ್ಕಾರವು ಅನುದಾನವನ್ನು ನೀಡುತ್ತಿದೆ. ಈ ಉಪ ಸುಧಾರಣೆಯನ್ನು ಬೆಂಗಳೂರು ಹೊರತು ಪಡಿಸಿ ಉಳಿದ 26 ಪಟ್ಟಣಗಳಲ್ಲಿ ಅನುಷ್ಠಾನಗೊಳಸಲು ಮೇಲೆ ಓದಲಾದ (1) ರ ಸರ್ಕಾರಿ ಆದೇಶದಲ್ಲಿ, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯನ್ನು Nodal agency ಯನ್ನಾಗಿ ನೇಮಿಸಲಾಗಿದೆ. ಮೇಲೆ ಓದಲಾದ (2) ರ ನಡವಳಿಯಲ್ಲಿ ಅಮೃತ್ ಯೋಜನೆಯಡಿಯ ರಾಜ್ಯ ಮಟ್ಟದ ಉನ್ನತ ಮಟ್ಟದ ಅಧಿಕಾರಯುಕ್ತ ಸಮಿತಿ (SHPSC) ಯು ನಗರ ನಕ್ಷೆ ಕೋಶಕ್ಕೆ ಸದರಿ ಕಾರ್ಯದ ಅನುಷ್ಠಾನದ ಜವಾಬ್ದಾರಿಯನ್ನು ನೀಡಲಾಗಿದೆ.

ಅಮೃತ್ ಅಭಿಯಾನದಡಿಯಲ್ಲಿರುವ ಎಲ್ಲಾ 27 ಪಟ್ಟಣಗಳಗೂ ಈಗಾಗಲೇ ಮಹಾಯೋಜನೆಗಳು ಇದ್ದು, ಇದರಲ್ಲಿ ಹಲವು ಪಟ್ಟಣಗಳ ಯೋಜನಾ ಅವಧಿ ಮುಕ್ತಾಯದ ಹಂತವನ್ನು ತಲುಪಿರುವುದರಿಂದ, ಇವುಗಳಿಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆಯಡಿಯಲ್ಲಿ ಪರಿಷ್ಕೃತ ಮಹಾಯೋಜನೆಗಳನ್ನು ತಯಾರಿಸುವ ಅವಶ್ಯಕತೆಯಿರುತ್ತದೆ. ಮುಂದುವರೆದು, ಅಮೃತ್ ಅಭಿಯಾನದಡಿಯಲ್ಲಿರುವ ಬಹುತೇಕ ನಗರ/ಪಟ್ಟಣಗಳಿಗೆ Geographic Information System (GIS) ನಲ್ಲಿ ತಯಾರಿಸಲಾದ ಮೂಲ ನಕ್ಷೆಗಳು ನಗರ ನಕ್ಷೆ ಕೋಶದಲ್ಲಿ ಲಭ್ಯವಿದ್ದು, ಅವುಗಳನ್ನು ಸೂಕ್ತ ರೀತಿಯಲ್ಲಿ ಕಾಲೋಚಿತಗೊಳಸಿ ಅಮೃತ್ ಅಭಿಯಾನದಡಿಯ ನಿಯಮಾವಳಿಗಳನ್ನು ಅಳವಡಿಸಿಕೊಂಡು Geographic Information System (GIS) ನಲ್ಲಿ ಪರಿಷ್ಕೃತ ಮಹಾಯೋಜನೆಗಳನ್ನು ತಯಾರಿಸುವ ಅವಶ್ಯಕತೆಯನ್ನು ಗಮನಿಸಿ ಕಾರ್ಯದರ್ಶಿಗಳು, ಕರ್ನಾಟಕ ಮುನಿಸಿಪಲ್ ಡಾಟಾ ಸೊಸೈಟಿ ರವರು ಮೇಲೆ ಓದಲಾದ (3) ರಲ್ಲಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಕಾರ್ಯದರ್ಶಿಗಳು, ಕರ್ನಾಟಕ ಮುನಿಸಿಪಲ್ ಡಾಟಾ ಸೊಸೈಟಿ ರವರ ಪ್ರಸ್ತಾವನೆಯನ್ನು ಪರಿಶೀಲಿಸಿ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ನಅಇ 318 ಸಿಎಸ್‌ಎಸ್ 2017,
ಬೆಂಗಳೂರು ದಿನಾಂಕ:16-12-2017

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನಲೆಯಲ್ಲಿ ಅಮೃತ್ ಅಭಿಯಾನದಡಿಯಲ್ಲಿರುವ 27 ಪಟ್ಟಣಗಳಲ್ಲಿ ಮಹಾಯೋಜನಾ ಅವಧಿ ಮುಕ್ತಾಯದ ಹಂತವನ್ನು ತಲುಪಿರುವ ನಗರ/ಪಟ್ಟಣಗಳಿಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆಯಡಿಯಲ್ಲಿ ಅಮೃತ್ ನಿಯಮಾವಳಿಗಳನ್ನು ಅಳವಡಿಸಿಕೊಂಡು Geographic Information System (GIS) ನಲ್ಲಿ ಮಹಾಯೋಜನೆ (ಪರಿಷ್ಕತ) ಯನ್ನು ಶೀಘ್ರವಾಗಿ ತಯಾರಿಸಲು ಈ ಮೂಲಕ ಆದೇಶಿಸಲಾಗಿದೆ. ಸದರಿ ಪರಿಷ್ಕೃತ ಮಹಾಯೋಜನೆಗಳನ್ನು ತಯಾರಿಸಲು ನಗರ ನಕ್ಷೆ ಕೋಶದಲ್ಲಿ ಲಭ್ಯವಿರುವ Geographic Information System (GIS) ಮೂಲ ನಕ್ಷೆಗಳನ್ನು ಸೂಕ್ತ ರೀತಿಯಲ್ಲಿ ಕಾಲೋಚಿತಗೊಳಿಸಿ, ಉಪಯೋಗಿಸಿಕೊಳ್ಳತಕ್ಕದ್ದು ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ ತಯಾರಿಸುವ Terms of Reference (TOR) ಅನ್ವಯ ಅನುಷ್ಠಾನಗೊಳಿಸಲು ಆದೇಶಿಸಿದೆ. ಪರಿಷ್ಕೃತ ಮಹಾಯೋಜನೆಗಳು ಅಮೃತ್ ನಿಯಮಾವಳಿಯನ್ವಯ Geographic Information System (GIS) ನಲ್ಲಿ ಇರುವ ಬಗ್ಗೆ ಕೆ.ಎಂ.ಡಿ.ಎಸ್ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ನಗರ ನಕ್ಷೆ ಕೋಶವು ಖಚಿತಪಡಿಸಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

ಲಲಿತಾಬಾಯಿ.ಕೆ
(ಲಲಿತಾಬಾಯಿ. ಕೆ)
ಸರ್ಕಾರದ ಅಧೀನ ಕಾರ್ಯದರ್ಶಿ(ಯೋಮೇಕೋ),
ನಗರಾಭಿವೃದ್ಧಿ ಇಲಾಖೆ

ಇವರಿಗೆ:

1. ಸರ್ಕಾರದ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ವಿಕಾಸ ಸೌಧ, ಬೆಂಗಳೂರು.
2. ನಿರ್ದೇಶಕರು ಪೌರಾಡಳಿತ ನಿರ್ದೇಶನಾಲಯ ಹಾಗೂ ನೋಡಲ್ ಅಧಿಕಾರಿ, ಅಮೃತ್.
3. ಸರ್ಕಾರದ ಉಪ ಕಾರ್ಯದರ್ಶಿಗಳು-2, ನಗರಾಭಿವೃದ್ಧಿ ಇಲಾಖೆ, ವಿಕಾಸ ಸೌಧ, ಬೆಂಗಳೂರು.
4. ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರು, ಬೆಂಗಳೂರು
5. ಜಂಟಿ ನಿರ್ದೇಶಕರು, ನ.ನ.ಕೋಶ, ಬೆಂಗಳೂರು.
6. ಜಂಟಿ ನಿರ್ದೇಶಕರು (ಹಣಕಾಸು), ಪೌರಾಡಳಿತ ನಿರ್ದೇಶನಾಲಯ, ವಿ.ವಿ.ಗೋಪುರ, ಬೆಂಗಳೂರು.
7. ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರ, ಕೆ.ಜಿ.ಎಫ್, ಮಂಡ್ಯ, ಉಡುಪಿ, ಬೆಂಗಳೂರು, ಹೊಸಪೇಟೆ, ದಾವಣಗೆರೆ-ಹರಿಹರ, ಬಾಗಲಕೋಟೆ, ಹುಬ್ಬಳ್ಳಿ-ಧಾರವಾಡ, ವಿಜಯಪುರ, ಗದಗ-ಬೆಟಗೇರಿ, ತುಮಕೂರು, ಹಾಸನ, ಚಿತ್ರದುರ್ಗ, ಮಂಗಳೂರು, ಕೋಲಾರ, ಬಳ್ಳಾರಿ, ಕಲಬುರ್ಗಿ, ಚಿಕ್ಕಮಗಳೂರು, ಮೈಸೂರು, ಶಿವಮೊಗ್ಗ-ಭದ್ರಾವತಿ, ಬೆಳಗಾವಿ, ಬೀದರ್ ಮತ್ತು ರಾಯಚೂರು.
8. ಸದಸ್ಯ ಕಾರ್ಯದರ್ಶಿಗಳು, ಯೋಜನಾ ಪ್ರಾಧಿಕಾರ, ಬಾದಾಮಿ, ರಾಣೇಬೆನ್ನೂರು ಹಾಗೂ ಗಂಗಾವತಿ.